OFFICIAL RESOLUTION

Re : *Adoption of the Wild life (Protection) Act, 1972 in the State of Mysore.*

Sri K. H. PATIL (Minister for Agriculture and Forests).—I beg to move :

"That whereas this Assembly considers that it is desirable to have a uniform law throughout India for the protection of Wild Animals and Birds and for all matters connected therewith or ancillary and incidental thereto ;

"And whereas the subject matter of such a law is relatable mainly to entry 20 (Protection of Wild Animals and Birds) of List II of the Seventh Schedule to the Constitution of India ;

"And whereas in pursuance of resolutions passed under clause (1) of Article 252 of the Constitution of India, by all the Houses of the Legislature of the States of Andhra Pradesh, Bihar, Gujarat, Haryana, Himachal Pradesh, Madhya Pradesh, Manipur, Punjab, Rajasthan, Uttar Pradesh and West Bengal to the effect that the matters aforesaid should be regulated in those States by Parliament by law, the Parliament has enacted the Wild Life (Protection) Act, 1972 (Central Act 53 of 1972) ;

"And whereas it appears to this Assembly to be desirable that the aforesaid Wild Life (Protection) Act, 1972, should be adopted in the State of Mysore ;

"Now, therefore in exercise of the powers conferred by clause (1) of Article 252 of the Constitution of India, this Assembly hereby resolves that the Wild Life (Protection) Act, 1972 (Central Act 53 of 1972) should be adopted in the State of Mysore."

Madam SPEAKER.—Motion moved :

"That whereas this Assembly considers that it is desirable to have a uniform law throughout India for the protection of Wild Animals and Birds and for all matters connected therewith or ancillary and incidental thereto ;

"And whereas the subject matter of such a law is relatable mainly to entry 20 (Protection of Wild Animals and Birds) of List II of the Seventh Schedule to the Constitution of India ;

(MADAM SPEAKER)

"And whereas in pursuance of resolutions passed under clause (1) of Article 252 of the Constitution of India, by all the Houses of the Legislature of the States of Andhra Pradesh, Bihar, Gujarat, Haryana, Himachal Pradesh, Madhya Pradesh, Manipur, Punjab, Rajasthan, Uttar Pradesh and West Bengal to the effect that the matters aforesaid should be regulated in those States by Parliament by law, the Parliament has enacted the Wild Life (Protection) Act, 1972 (Central Act 53 of 1972):

"And whereas it appears to this Assembly to be desirable that the aforesaid Wild Life (Protection) Act, 1972 should be adopted in the State of Mysore;

"Now, therefore in exercise of the powers conferred by clause (1) of Article 252 of the Constitution of India, this Assembly hereby resolves that the Wild Life (Protection) Act, 1972 (Central Act 53 of 1972) should be adopted in the State of Mysore."

† Sri K. H. PATIL:—Madam Speaker, I do not want to take much time of this August House because this Resolution has already been discussed and has been passed. But by the time our Resolution reached the hands of the Parliament, it had already enacted the law and therefore that resolution was not effective. Therefore we have to pass this resolution once again. I hope that the House will agree and the resolution they have already passed will be adhered to.

Madam SPEAKER:—I will put it to the vote of the House. The question is:

"That whereas this Assembly considers that it is desirable to have a uniform law throughout India for the protection of Wild Animals and Birds and for all matters connected therewith or ancillary and incidental thereto:

"And whereas the subject matter of such a law is relatable mainly to entry 20 (Protection of Wild Animals and Birds) of List II of the Seventh Schedule to the Constitution of India;

"And whereas in pursuance of resolutions passed under clause (1) of Article 252 of the Constitution of India, by all the Houses of the Legislature of the States of Andhra Pradesh, Bihar, Gujarat, Haryana, Himachal Pradesh, Madhya Pradesh, Manipur, Punjab, Rajasthan, Uttar Pradesh and West Bengal to the effect that the matters

aforesaid should be regulated in those States by Parliament by law, the Parliament has enacted the Wild Life (Protection) Act, 1972 (Central Act 53 of 1972);

"And whereas it appears to this Assembly to be desirable that the aforesaid Wild Life (Protection) Act, 1972 should be adopted in the State of Mysore;

"Now, therefore in exercise of the powers conferred by clause (1) of Article 252 of the Constitution of India, this Assembly hereby resolves that the Wild Life (Protection) Act, 1972 (Central Act 53 of 1972) should be adopted in the State of Mysore."

The motion was adopted

PAPERS LAID ON THE TABLE—*(contd.)*

Sri K. H. PATIL.—Yesterday while making a statement, I said that the date of the order is 24th November 1970 but it must be 24th November 1971.

Shri Devegowda urged that the order must be placed on the Table of the House. I have sent a copy of the order to him along with a letter and I will also place a copy of the order on the Table of the House.*

APPEAL OF STATE RELIEF COUNCIL TO HELP THE DISTRESSED PEOPLE OF THE SCARCITY AREAS IN THE STATE.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮೈಸೂರು ರಾಜ್ಯದಲ್ಲಿ ಉಂಟಾಗಿರುತಕ್ಕ ಸ್ಕೇರ್ಸಿಟಿ ಕಂಡಿಷನ್ ಪ್ರದೇಶದ ಜನರಿಗೆ ಸಾವು—ಜೀವನಗಳ ಹೋರಾಟ ನಡೆಯುತ್ತಿದೆ. ಅದಕ್ಕಾಗಿ ಸಾರ್ವಜನಿಕರು ತಮ್ಮ ಕೈಲಾದ ಎಲ್ಲಾ ಸಹಕಾರ ಸಹಾಯಗಳನ್ನು ನೀಡಬೇಕು ಎಂಬುದಾಗಿ ಇಲ್ಲಿಗೆ 4—5 ದಿನಗಳಿಂದಲೂ ಪತ್ರಿಕೆಗಳಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಫೋಟೋ ಹಾಕಿ ಹೇಳಿಕೆ ಬರುತ್ತಿದೆ. ಆದ್ದರಿಂದ ಈ ಕೌನ್‌ಸಿಲ್ಲನ್ನು ಯಾರು ನೇಮಕ ಮಾಡಿದ್ದಾರೆ ? ಸರಕಾರದವರು ನೇಮಕ ಮಾಡಿರತಕ್ಕ ಒಂದು ಕೌನ್‌ಸಿಲ್ಲೇ ಇದು ? ಹಾಗಿದ್ದರೆ ಈ ಕೌನ್‌ಸಿಲ್ಲಿನಲ್ಲಿ ಯಾರು ಯಾರು ಸದಸ್ಯರಿದ್ದಾರೆ ? ಈ ಸಮಿತಿಯವರು ಇಲ್ಲಿಯ ತನಕ ಎಷ್ಟು ದವಸ ಧಾನ್ಯಗಳನ್ನು ಎತ್ತಿದ್ದಾರೆ ! ಇವರು ಎಷ್ಟು ಮೇವನ್ನು ಎತ್ತಿದ್ದಾರೆ ? ಹಾಗೆ ಸಂಗ್ರಹಣೆ ಮಾಡಿದ್ದನ್ನೆಲ್ಲಾ ಏನು ಮಾಡಿದ್ದಾರೆ ! ಆ ಪ್ರದೇಶದ ಜನರಿಗೆ ಕಳುಹಿಸಿದ್ದಾರೆಯೇ ? ಇವರು ಎತ್ತತಕ್ಕ ಹಣ ದವಸ ಧಾನ್ಯಗಳು ಆ ನೊಂದ ಜನರಿಗೆ ನೇರವಾಗಿ ಖಚಿತವಾಗಿ ತಲುಪುತ್ತಿವೆ ಅನ್ನುವದಕ್ಕೆ ಸಾಕ್ಷ್ಯ ಎಲ್ಲಿದೆ ? ಈ ಸಮಿತಿಗೆ ಮುಖ್ಯ ಮಂತ್ರಿಗಳೇ (ನಾದರೂ ಅಧ್ಯಕ್ಷರಾಗಿದ್ದಾರೆಯೇ ? ಅವರು ಅಧ್ಯಕ್ಷರಿಲ್ಲದಿದ್ದರೆ ಇವರ ಫೋಟೋವನ್ನು ಆ ಜನರು ಇವರ ಒಪ್ಪಿಗೆ ಇಲ್ಲದೆ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದಾರೆ ! ಈ ಎಲ್ಲಾ ವಿಚಾರಗಳಿಗೂ ಸರಕಾರದವರು ಒಂದು ನಿರ್ದಿಷ್ಟವಾದ ಹೇಳಿಕೆಯನ್ನು ಈ ಸಭೆಗೆ ಕೊಡಬೇಕೆಂದು ನಾನು ಬಹಳ ಕಳಕಳಿಯಿಂದ ಅಧ್ಯಕ್ಷರ ಮೂಲಕ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

*Copy placed in the Mysore Legislature Library *vide* No. ...., dated 7th December 1972.

† ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ. ರಾಜ್ಯದಲ್ಲಿ ಹೀಗೆ ಯಾವಾಗಲಾದರೂ ಭೀಕರ ಕ್ಷಾಮ ಉಂಟಾದಾಗ ರಾಜ್ಯದಲ್ಲಿರತಕ್ಕ ಸಾರ್ವಜನಿಕರು ಅದರಲ್ಲೂ ಆ ಕ್ಷಾಮಪೀಡಿತ ಜನರಬ್ಬೆ ಹೆಚ್ಚಿನ ಅನುಕಂಪವುಳ್ಳಂಥ ಜನರು ಅವರವರಲ್ಲೇ ಒಂದೊಂದು ಸಮಿತಿಗಳನ್ನು ಅವರವರೇ ಮಾಡಿಕೊಂಡು ಸಾರ್ವಜನಿಕರು ಯಾರು ಏನೇನು ಸಾಮಾನುಗಳನ್ನು ಕೊಡುತ್ತಾರೆ. ಯಾವು ಬಟ್ಟೆ ಇತ್ಯಾದಿಗಳನ್ನು ಕೊಡುತ್ತಾರೆ ಎಂಬುದನ್ನೆಲ್ಲಾ ಸಂಗ್ರಹಣೆ ಮಾಡಿ ಆ ಜನರಿಗೆ ರವಾನೆ ಮಾಡುತ್ತಾರೆ. ಇದು ಯಾವಾಗಲೂ ಮಾಮೂಲಾಗಿ ಸ್ವಾಭಾವಿಕವಾಗಿ ನಡೆಯುತಕ್ಕ ಒಂದು ಕಾರ್ಯಚಟುವಟಿಕೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೇಕೆ ಇಷ್ಟು ಕಳವಳವುಂಟಾಯಿತೋ ತಿಳಿಯದಾಗಿದೆ. ಇಂಥ ಕೌನ್‌ಸಿಲ್‌ಗಳಿಗೆ ಅವರವರೇ ಅಧಕ್ಷರು, ಅವರವರೇ ಕಾರ್ಯದರ್ಶಿಗಳು. ಇವನ್ನು ಸರ್ಕಾರದವರೇನೂ ನೇಮಕ ಮಾಡಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಹಾಗಾದರೆ ಯಾರು ಬೇಕಾದರೂ ಹೊಟ್ಟಿಗಿಲ್ಲದ ಜನರು ಇಂಥ ಒಂದು ನೆಪವನ್ನು ಹೂಡಿಕೊಂಡು ಜನರಿಂದ ಕಾಳು ಕಡ್ಡಿ ಬಟ್ಟೆ ಹಣವನ್ನು ಎತ್ತಿ ಕೊಂಡು ಕಳ್ಳತನದಲ್ಲಿ ಸುಖವಾಗಿ ಜೀವನ ಮಾಡಬಹುದಲ್ಲವೇ ? ಇಂಥದನ್ನೆಲ್ಲಾ ಸರ್ಕಾರ ಅಲೋ ಮಾಡುತ್ತದೆಯೇ? ನಾಳೆ ನಾನೂ ಕೂಡ ದೇಶದಲ್ಲಿ ಚಿನ್ನ ಬೇಕು ಎಂದು ಎತ್ತುವುದಕ್ಕೆ ಹೊರಡುತ್ತೇನೆ. ಅದನ್ನೂ ಸರ್ಕಾರದವರು ಅಲೋ ಮಾಡುತ್ತಾರೆಯೆ ?

ಅಧಕ್ಷರು.—ತಮ್ಮಲ್ಲಿ ಅಂಥ ನಿದರ್ಶನಗಳಿದ್ದರೆ ಸರ್ಕಾರಕ್ಕೆ ತಿಳಿಸಿ.

ಶ್ರೀ ಪಾಟಾಳ್ ನಾಗರಾಜ್.—ಹಿಂದೆ ಅನೇಕರು ಜನರಿಂದ ಚಿನ್ನವನ್ನು ಎತ್ತಿಕೊಂಡು ಅದರ ಬದಲು ಹತ್ತಾಳೆಯ ಒಡವೆಗಳನ್ನು ಕೊಟ್ಟರು. ಜನರಿಂದ ವಸೂರ್ಮಾಡಕ್ಕ ಹಣಕ್ಕೆಲ್ಲಾ ಯಾರು ಸರಿಯಾದ ಲೆಕ್ಕಪತ್ರಗಳನ್ನಿಟ್ಟಿದ್ದಾರೆ ? ಇದನ್ನು ನೇಮಕ ಮಾಡಿದವರಾರು ! ಅದರ ಸದಸ್ಯರಾರು ಎಂಬುದನ್ನು ಸಭೆಗೆ ತಿಳಿಸಬೇಕು.

ಶ್ರೀ ಬಿ. ಪುಟ್ಟಸ್ವಾಮೆಯ್ಯ (ರಾಮನಗರ).—ಮಾನ್ಯ ಅಧಕ್ಷರೇ ಆ ಸಮಿತಿಯಲ್ಲಿರತಕ್ಕ ಸದಸ್ಯರು ಯಾರು ? ಅವರೇನು ನಮ್ಮ ರಾಜ್ಯದವರೇ ಅಥವಾ ಹೊರಗಡೆಯವರೇ ? ಈ ಅಂಶವನ್ನು ಮಂತ್ರಿಗಳು ಸ್ಪಷ್ಟಪಡಿಸಬೇಕು. ಅವರು ಅಂಥ ಸತ್ಯವಂತ ಜನರಾಗಿದ್ದರೆ ನಿಷ್ಠಾವಂತ ಜನರಾಗಿದ್ದರ ಅವರೇಕೆ ನಮ್ಮ ರಾಜ್ಯದ ಜನನಾಯಕರಾದ ಮುಖ್ಯ ಮಂತ್ರಿಗಳ ಫೋಜೋ ಪತ್ರಿಕೆಯಲ್ಲಿ ಮೊದಿನಬೇಕಾಗಿತ್ತು ! ಅವರು ನಿಷ್ಠಾವಂತ ಜನರಾಗಿದ್ದರ ಇವರ ಮುಖ್ಯ ಚಿತ್ರದ ಅಗತ್ಯ ಅವರಿಗಿರಲಿಲ್ಲ. ಅಲ್ಲಿ ಸರ್ಕಾರದ ಮಂತ್ರಿಗಳ ಮುಖ ಚಿತ್ರವಿರುವುದರಿಂದ ಈ ಮಾನ್ಯ ಸಭೆಯವರು ಅದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕಾಗಿತ್ತು. ಆದರೆ ಹಾಗೇಕೆ ಮಾಡಲಲ್ಲ ಅನ್ನುವುದು ಒಂದು ಶಂಕೆಗೆ ಅವಕಾಶ ಉಂಟುಮಾಡುತಕ್ಕದಾಗಿದೆ. ಆದುದರಿಂದ ಸರ್ಕಾದವರು ಈ ವಿಚಾರದಲ್ಲಿ ಅಷ್ಟು ಲಾಘುವಾಗಿ ಉತ್ತರ ಹೇಳತಕ್ಕದು ಸರಿಯ್ದಾಲ್ಲ. ಸರಕಾರದವರ ಅನುಮತಿ ಪಡೆಯದೆ ಇವರೇಕೆ ಮುಖ್ಯ ಮಂತ್ರಿಗಳ ಮುಖ ಚಿತ್ರವನ್ನು ಅವರು ಪ್ರಚಾರ ಮಾಡುವುದಕ್ಕೆ ಬಿಟ್ಟರು ? ಈ ಎಲ್ಲಾ ವಿಚಾರಗಳ ಬಗ್ಗೆ ವಿವರವಾದ ಉತ್ತರ ಬೇಕು.

(ಶ್ರೀ ಬಂಗಾರಪ್ಪನವರು ಎದ್ದು ನಿಂತರು)

ಅಧ್ಯಕ್ಷರು.—ಇವರ ಮೇಲೆ ತಾವು ಚರ್ಚೆ ಮಾಡಬೇಕೇ ?

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನೇಕನಂಘ ಸಂಸ್ಥೆಗಳು ಈಕಷ್ಟಕಾಲ ಬಂದಾಗ್ಗೆ ಈರೀತಿ ಮಾಡಿಕೊಂಡು ಹೋಗುವುದು ಒಳ್ಳೆಯದು. ಬರಗಾಲಪೀಡಿತ ಪ್ರದೇಶಗಳಿಗೆ ಹುಲ್ಲನ್ನಾಗಲೀ ಆಹಾರವನ್ನಾಗಲ ಧಾನ್ಯವನ್ನಾಗಲ್ಲೀ, ಅಥವಾ ಹಣವನ್ನಾಗಲೀ ಒದಗಿಸುವುದು ನಿಜವಾಗಿ ಒಳ್ಳೆಯದೇ. ಇದಕ್ಕೆ ನಮ್ಮ ವಿರೋಧವೇನೂ ಇಲ್ಲ. ಅದು ತಪ್ಪು ಎಂದು ನಾವು ಹೇಳುವುದಿಲ್ಲ. ಇಂತಹ ಸಂದರ್ಭದಲ್ಲಿ ನಾವು ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಕೆಲವು ಸಂಘ ಸಂಸ್ಥೆಗಳು ಮಾನ್ಯ ಸದಸ್ಯರು ಕೆಲವರು ಹೇಳಿದಂತೆ ಈ ಒಂದು ಅಭಾವ ಪರಿಸ್ಥಿತಿ ಎಂಬ ಹೆಸರಿನಲ್ಲಿ ಅನೇಕ ಪವಾರ್ಧಗಳನ್ನು ದೋಚಿಕೊಂಡು ಹೋಗುವುದೂ ಉಂಟು. ಅಂಥಾದ್ದನ್ನು ಕೂಡಲೇ ತಪ್ಪಿಸಬೇಕಾಗುದು ಸ್ಥಳೀಯ ಕರ್ತವ್ಯ ಈ ವಿಚಾರದ ಬಗ್ಗೆ ರಾಜ್ಯ ಸರ್ಕಾರದವರು ಈಗಾಗಲೇ ಒಂದು ಸಮಿತಿಯನ್ನು ರಚಿಸಬೇಕಾಗಿತ್ತು. ಆ ರೀತಿ ಮಾಡಿದ್ದರೆ ಈ ಪ್ರಶ್ನೆ ಶಾಸನಸಭೆಯ ಮುಂದೆ ಬರುತ್ತಲೇ ಇರಲಿಲ್ಲ. ಸರ್ಕಾರದ ವತಿಯಿಂದ ಇದಕ್ಕಾಗಿಯೇ ಒಂದು ಕಮಿಟಿಯನ್ನು ಏಕೆ ಮಾಡಬಾರದು ? ಅಥವಾ ಸರ್ಕಾರದ ಮೂಲಕ ರೆಕಗ್‌ನೈಜ್ ಆಗಿರತಕ್ಕ ಸಂಘಸಂಸ್ಥೆಗಳಿಗೆ ಈ ವಿಚಾರದ ಬಗ್ಗೆ ಒಂದು

ಪರವಾನೆ ಕೊಟ್ಟಿದ್ದರೂ ಬಹಳ ಒಳ್ಳೆಯದಾಗಿತ್ತು. ನನಗೆ ತಿಳಿದು ಬಂದ ಹಾಗೆ ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಯವರ ಫೋಟೊ ಹಾಕಿಕೊಂಡು ಒಂದೆರಡು ಸಂಸ್ಥೆಗಳು ಅಭಾವ ಪರಿಸ್ಥಿತಿಯ ಬಗ್ಗೆ ಜನರಿಂದ ನೆರವು ಕೇಳಲು ಪ್ರಚಾರಮಾಡುತ್ತಿದ್ದಾರೆ. ಇದರಲ್ಲಿ ಯಾರ್ಯಾರಿಂದ ಎಷ್ಟೆಷ್ಟು ಬಂತು, ಅದು ಯಾರಿಗೆ ಹೋಗಿ ಸೇರುತ್ತದೆನ್ನುವ ಬಗ್ಗೆ ಏನೂ ಗೊತಾಗುವುದಿಲ್ಲ. ಯಾರು ಆ ಸಂಘ ಸಂಸ್ಥೆಗಳಿಗೆ ಅಧಿಕಾರ ಕೊಟ್ಟವರು, ಸರ್ಕಾರದಿಂದ ಏನಾದರೂ ಅಂತಹ ಸಂಸ್ಥೆಗಳಿಗೆ ಪರವಾನೆ ಕೊಡಲಾಗಿದೆಯೇ ವಿರುಬುದನ್ನಾದರೂ ಸರ್ಕಾರ ನಮಗೆ ತಿಳಿಸಬೇಕು. ಇಂತಹ ಸಂಘ ಸಂಸ್ಥೆಗಳ ಬಗ್ಗೆ ಸರ್ಕಾರದ ನಿಲುವು ಏನೆಂಬುದನ್ನು ಒಂದು ಹೇಳಿಕೆಯ ಮೂಲಕ ಈ ಸಭೆಗೆ ತಿಳಿಸಬೇಕು.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಯಾರೋ ವಾಲಂಟಿಯರಾಗಿ ಆ ರೀತಿ ಮಾಡಿಕೊಂಡಿದ್ದಾರೆಂದು ಹಿಂದೆ ಹೇಳಿದ್ದೀರಿ. ಒಂದು ವೇಳೆ ಕೆಲವು ಕಂಟ್ರಾಕ್ಟರ್ಸ್ ಸೇರಿಸಿಕೊಂಡು ವಾಲಂಟಿಯರಾಗಿ ಒಂದು ಕಮಿಟಿಯನ್ನು ಮಾಡಿಕೊಂಡು ಮಾನ್ಯ ಶ್ರೀ ಚೆನ್ನಬಸಪ್ಪನವರ ಫೋಟೊ ಹಾಕಿಕೊಂಡು ಪ್ರಚಾರಮಾಡಿದರೆ, ಲೋಕೋಪಯೋಗಿ ಸಚಿವರು ನಮ್ಮನ್ನೆ ನೋಡ್ತಿಕೊಂಡು ಇರುತ್ತಾರೆಯೇ ? ಅಂದಮೇಲೆ ಅದು ರಿಲೀಫ್ ಕಮಿಟಿಯೋ ಅಥವಾ ಕಾಂಗ್ರೆಸ್ ಕಮಿಟಿಯೋ ? ಅಭಾವ ಪರಿಸ್ಥಿತಿ ಇರುವ ಪ್ರದೇಶಗಳಲ್ಲಿ ರಿಲೀಫ್ ಕೊಡುವ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎಸ್. ಎಂ. ಕೃಷ್ಣ (ಮಲ್ಲೇಶ್ವರಂ).—ಹಿಂದೆ ಬೇಕಾದಷ್ಟು ಬರಗಾಲ ಬಂದಾಗ, ಕಮ್ಯೂನಲ್ ಡಿಸ್ಟರ್ ಬೆನ್ಸಸ್ ಆಗಾಗ್ಗೆ ಕೇವಲ ಸರ್ಕಾರದ ವತಿಯಿಂದಲೇ ರಿಲೀಫ್ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲ, ಧನಸಹಾಯ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾವ್ಯಾರು ಸಂಘ ಸ್ಥಾಪನೆಗಳು ಒಟ್ಟುಗೂಡಿ ಸಕ್ರಿಯ ಪಾತ್ರ ವಹಿಸಿ ಹಾಲು, ಬಟ್ಟೆ, ಧನ, ಇವೆಲ್ಲವನ್ನೂ ಸಹಾಯಮಾಡಿ ನಿಧಿ ಶೇಖರಣೆ ಮಾಡಿ ಜನಗಳಿಗೆ ಅನೇಕ ಸೌಲಭ್ಯಗಳನ್ನು ಮಾಡಿಕೊಡಬೇಕೆಂದು ನಿರ್ಧಾರಮಾಡಿ ಬೇಕಾದಷ್ಟು ಅಭಾವ ಪರಿಸ್ಥಿತಿಯ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುರಾಗಿದೆ. ಅದೇ ರೀತಿಯಲ್ಲಿ ಅಂತಹ ಉದಾತ್ತ ಧ್ಯೇಯಗಳನ್ನು ಇಟ್ಟುಕೊಂಡು ಕೆಲವಾರು ಸಂಘ ಸಂಸ್ಥೆಗಳು ಸಹಾಯಮಾಡುತ್ತೇವೆಂದು ಮುಂದೆ ಬಂದರೆ, ಅದಕ್ಕೆ ಅಡ್ಡಿಮಾಡುವುದು ಸರಿಯಲ್ಲ. ಒಂದುವೇಳೆ ಅವರು ಮಾಡತಕ್ಕ ಕೆಲಸ ಕಾರ್ಯಗಳಲ್ಲಿ ಏನಾದರೂ ಲೋಪ ಕಂಡುಬಂದರೆ, ಆ ಲೋಪವನ್ನು ಎತ್ತಿ ತೋರಿಸುವುದು ನಮ್ಮ ಧರ್ಮ. ಅದನ್ನು ತಿದ್ದಿಕೊಳ್ಳುವುದು ಅವರ ಕರ್ತವ್ಯ. ಏನೂ ಇಲ್ಲದ ಅವರು ಯಾರೋ ಏನೋ ಕೆಲಸ ಮಾಡುತ್ತಾರೆಂದ ನಮ್ಮನೆ ಹೇಳುವುದು ಸರಿಯಲ್ಲ. ಒಂದುವೇಳೆ ಅಂತಹ ಸಂಘಸಂಸ್ಥೆಗಳು ನಿಜವಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರೆ ಅದರ ಬಗ್ಗೆ ಎಲ್ಲರೂ ಮೆಚ್ಚುಗೆಯನ್ನು ವ್ಯಕ್ತಪಡಿಸುವುದು ಒಳ್ಳೆಯದು.

ಶ್ರೀ ಪಾಟಾಳ್ ನಾಗರಾಜ್.—ತಮ್ಮ ಕಾರ್ಯವ್ಯಾಪ್ತಿಯಲ್ಲಿ ನಮ್ಮ ವಿರೋಧವಿಲ್ಲ. ಅವರು ಮಾಡುತ್ತಿರುವ ಪ್ರಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಚಿತ್ರ ಇದೆ. ಅವರ ಚಿತ್ರವನ್ನು ಹಾಕಿರತಕ್ಕ ಪಾಂಫ್ಲೆಟ್ಸ್‌ಗಳನ್ನು ಎಲ್ಲಾ ಕಡೆಯೂ ಹಂಚುತ್ತಿದ್ದಾರೆ. ಇವರ ಚಿತ್ರಗಳನ್ನು ಹಾಕಿಕೊಂಡು ದುರೂಪಯೋಗ ಮಾಡಿಕೊಳ್ಳುವ ಅವಕಾಶಗಳು ಬೇರೆ ಇವೆ. ಆದರೆ ಈ ಸಮಿತಿಯವರು ಈ ರೀತಿ ಯಾಗಿ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಹಾಗಾದರೆ ಯಾರು ಬೇಕಾದರೂ ಮಾನ್ಯ ಮುಖ್ಯಮಂತ್ರಿಗಳ ಅಥವಾ ಪ್ರಧಾನಮಂತ್ರಿಗಳ ಫೋಟೊ ಹಾಕಿಕೊಂಡು ಅವರ ಹೆಸರಿನಲ್ಲಿ ಇಷ್ಟ ಬಂದಹಾಗೆ ಏನು ಬೇಕಾದರೂ ಪ್ರಚಾರಮಾಡಬಹುದೇ ? ಅಂತಹ ಸಂದರ್ಭಗಳಲ್ಲಿ ಸರ್ಕಾರ ನಮ್ಮನ್ನು ನಿರಬಹುದೇ ? ಸರ್ಕಾರ ಮಾಡಬೇಕಾದ ಕರ್ತವ್ಯವೇನು ? ಅದಕ್ಕಿಂತ ಮುಂಚಿತವಾಗಿಯೇ ಸರ್ಕಾರದ ವತಿಯಿಂದಲೇ ಎಲ್ಲ ಪಕ್ಷದವರನ್ನೊಳಗೊಂಡಂಥ ಒಂದು ಕಮಿಟಿಯನ್ನು ರಚಿಸಬಹುದಾಗಿತ್ತು. ಆ ರೀತಿಯಾಗಿ ಮಾಡಿದ್ದರೆ ನಾನು ಎಂದಿಗೂ ವಿರೋಧ ಮಾಡುತ್ತಿರಲಿಲ್ಲ. ಈ ಒಂದು ಕ್ರಮವನ್ನು ಸರ್ಕಾರ ಮೊದಲೇ ತೆಗೆದುಕೊಂಡಿದ್ದರೆ, ಇಂತಹ ಯಾವ ಸಂಸ್ಥೆಗಳೂ ಸಹ ಹುಟ್ಟುತ್ತಿರಲಿಲ್ಲ. ಆದರೆ ಈಗ ಪ್ರಚಾರಕ್ಕೆ ನಿಂತಿರುವ ಸಂಸ್ಥೆಯ ವ್ಯಾಪ್ತಿಯೇನು ? ಇದನ್ನು ನೇಮಿಸಿದವರು ಯಾರು ? ಮಾನ್ಯ ಮುಖ್ಯಮಂತ್ರಿಗಳ ಫೋಟೋವನ್ನು ಯಾರು ಬೇಕಾದರೂ ಯಾವ ರೀತಿಯಾದರೂ ಸರ್ಕಾರದ ಪರವಾನೆ ಇಲ್ಲದೆ ಉಪಯೋಗಿಸಬಹುದೇ ? ಆ ಸಂಘ ಸಂಸ್ಥೆಗಳು ಸರ್ಕಾರಕ್ಕೆ ಅದರ ಬಗ್ಗೆ ಅಂಕಿ ಅಂಶಗಳನ್ನು ವರದಿಮಾಡುತ್ತಾರೆಯೇ ? ಸರ್ಕಾರದವರೂ ಸಹ ಆ ಒಂದು ಅಂಕಿ ಅಂಶಗಳ ಬಗ್ಗೆ ನಿಗಾ ಇಟ್ಟಿದ್ದಾರೆಯೇ ? ಅಭಾವ ಪರಿಸ್ಥಿತಿ ಇರತಕ್ಕ ಪ್ರದೇಶಗಳಿಗೆ ಇಂತಹ ಸಂಸ್ಥೆಗಳಿಂದ ನಗದಾಗಿ ಹಣ ಹಾಗೂ ಇತರ ಸೌಕರ್ಯಗಳು ಮುಟ್ಟುತ್ತಿವೆಯೇ ಎಂದು ನಾನು ಕೇಳುತ್ತೇನೆ. ಯಾರು ಬೇಕಾದರೂ ಅಭಾವ ಪರಿಸ್ಥಿತಿಯ ಬಗ್ಗೆ ಸಹಾಯಮಾಡುತ್ತೇವೆಂದು ಮುಂದೆ ಬಂದು ಸರ್ಕಾರದ ವತಿಯಿಂದ ಪರವಾನೆ ಪಡೆದು ಕೆಲಸಕಾರ್ಯಗಳನ್ನು ಚೆನ್ನಾಗಿ ನಿರ್ವಹಿಸುತ್ತಿದ್ದರೆ ಅಂತಹ ಕೆಲಸಕಾರ್ಯಗಳ ಬಗ್ಗೆ ನನ್ನ ಸಂಪೂರ್ಣ ಬೆಂಬಲವಿದೆ. ಆ ರೀತಿ ಮಾಡದೆ

(ಶ್ರೀ ಪಾಟಾಳ್ ನಾಗರಾಜ್)

ಮಾನ್ಯ ಮುಖ್ಯಮಂತ್ರಿಗಳ ಅಥವಾ ಮಾನ್ಯ ಪ್ರಧಾನಮಂತ್ರಿಗಳ ಫೋಟೋ ಹಾಕಿಕೊಂಡು ಏನು ಬೇಕಾದರೂ ಯಾರೇ ಆಗಲಿ ಮಾಡಬಹುದೇ ? ಆ ರೀತಿ ಮಾಡುವುದಕ್ಕೆ ತಾವೇನಾದರೂ ಅಧಿಕಾರ ಕೊಟ್ಟಿದ್ದೀರಾ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಮಾತನಾಡುತ್ತಿರುವ ಧಾಟಿ ನೋಡಿದರೆ, ಇದೇನು ರಿಜಲ್ಯೂಷನ್ನೋ, ಕಾರ್ ಅಜೆಂಡೇಷನ್ ನೋಟೀಸೋ, ಅಥವಾ ಏನಾದರೂ ನಿಲುವಳಿ ಸೂಚನೆಯೋ ? ಯಾವ ರೂಲ್ ಪ್ರಕಾರ ಇವರು ಮಾತನಾಡುತ್ತಿದ್ದಾರೆ ?

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಏನಾದರೂ ಒಂದು ಚೂರು ಸಡಿಲ ಕೊಟ್ಟರೆ-ಈ ರೀತಿ ಮಾತನಾಡಿದರೆ ಹೇಗೆ ? ಯಾವ ಬೇಕಾದರೂ ಪ್ರೈಮ್ ಮಿನಿಸ್ಟರ್ ಫೋಟೊ ಹಾಕಿಕೊಂಡು ಏನು ಬೇಕಾದರೂ ಮಾಡಬಹುದೇ ಎಂಬುದಾಗಿ ಕೇಳುವುದು ಸರಿಯಲ್ಲ. ತಾವು ಕೇಳುವ ವಿಷಯ ನನಗೆ ಗೊತ್ತಾಯಿತು. ಅಂದಮೇಲೆ ಆದರ ಮೇಲೆ ಇಷ್ಟು ದೊಡ್ಡ ವ್ಯಾಖ್ಯಾನ ಏಕೆ ! ಎಲ್ಲೆಲ್ಲ ಏನಾಗಿದೆಯೆಂಬ ವಿಷಯಗಳನ್ನು ವಿಶದವಾಗಿ ಇಲ್ಲಿ ಹೇಳುವುದಕ್ಕೆ ಮಾನ್ಯ ಸದಸ್ಯರು ಶ್ರಮ ಮಾಡಿದರೆ ಹೇಗೆ ? ಆ ರೀತಿಯಾಗಿ ಹೇಳುವುದು ಸರಿಯಲ್ಲ.

ಒಬ್ಬ ಸದಸ್ಯರು :—(ಪಾಟಾಳ್ ನಾಗರಾಜ್ ಅವರನ್ನು ಉದ್ದೇಶಿಸಿ) ಗೆಟ್ ಔಟ್.

ಶ್ರೀ ಪಾಟಾಳ್ ನಾಗರಾಜ್.—ನನ್ನನ್ನು ಗೆಟ್ ಔಟ್ ಅಂದಿದ್ದಾರೆ. ಅದಕ್ಕಾಗಿ ನಾನು ಧರಣಿ ಮಾಡುತ್ತೇನೆ. ಆ ರೀತಿ ಅವರ ಕಡೆಯವರು ಹೇಳಬಹುದೇ ! ಇದು ಸರಿಯಲ್ಲ.

(ಶ್ರೀ ಪಾಟಾಳ್ ನಾಗರಾಜ್ ಅವರು ಧರಣಿ ಮುಷ್ಕರ ಮಾಡಿದರು)

ಅಧ್ಯಕ್ಷರು.—ಗೆಟ್ ಔಟ್ ಎಂದು ಹೇಳಿದ ಶಬ್ದವನ್ನು ನಾನು ಕೇಳಲೇ ಇಲ್ಲವಲ್ಲಾ ? ತಾವು ದಯವಿಟ್ಟು ತಮ್ಮ ಸ್ಥಳಕ್ಕೆ ಬನ್ನಿ.

(ಶ್ರೀ ಪಾಟಾಳ್ ನಾಗರಾಜ್ ಅವರು ಅವರ ಜಾಗಕ್ಕೆ ಬಂದು ಕುಳಿತರು)

†ಶ್ರೀ ವಿ. ಎನ್. ಪಾಟೀಲ್.—ನಾನು ಆ ವಿಚಾರವನ್ನು ಹೇಳುತ್ತಾ ಇಲ್ಲ, ಇಡೀರಲ್ಲಿ ಒಂದು ಸೋಷಿಯಲಿಸ್ಟ್ ಆಸ್ಪೆಕ್ಟ್ ಇದೆ. ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ನಾನು ಹೇಳುವುದು ಯಾವ ಫೋಟೋಗೆ ಸಂಬಂಧಪಟ್ಟುದಲ್ಲ ನಾನು ಒಂದೆರಡು ಕ್ಲಾರಿಫಿಕೇಷನ್‌ಗಳನ್ನು ಕೇಳುತ್ತೇನೆ. ಬಡಜನರಿಗೆ ಸಹಾಯಮಾಡುವ ಉದ್ದೇಶದಿಂದ ಕೆಲವು ಸಂಸ್ಥೆಗಳು ಕೆಲಸಮಾಡುತ್ತಿವೆಯೆಂದು ಕೇಳಿದೆ. ಈಗ ಕೆಲವು ಜನರು ಅಭಾವ ಪರಿಸ್ಥಿತಿ ಇರುವ ಪ್ರದೇಶಗಳಲ್ಲಿ ನರಳುತ್ತಿರುವವರಿಗೆ ಸಹಾಯಮಾಡಬೇಕೆಂದು ಕೆಲವು ಕಾಣಿಕೆಗಳನ್ನು ಕೊಡುತ್ತಾರೆ. ಹಾಲು ಕೊಡುತ್ತಾರೆ. ಬಟ್ಟೆಗಳನ್ನು ಕೊಡುತ್ತಾರೆ. ಧಾನ್ಯ ಕೊಡುತ್ತಾರೆ, ಹಣ ಕೊಡುತ್ತಾರೆ ಬಿದರ್ ಮತ್ತು ರಾಯಚೂರು ಜಿಲ್ಲೆಗಳಿಗೆ ಇವನ್ನು ಮುಟ್ಟಿಸುವಾಗ ಅದರ ಬಗ್ಗೆ ಆಗತಕ್ಕ ಚಾರ್ಜನ್ನು ಪೋರ್ಟ್ ಚಾರ್ಜನ್ನು ಸರ್ಕಾರದವರು ಬೇರೆ ಮಾಡುತ್ತಾರೆಂಬ ಆಶ್ವಾಸನೆ ಈ ಸಭೆಗೆ ಕೊಡಬೇಕು. ಆ ರಿಲೀಫ್ ಕಮಿಟಿಯವರು ಸರ್ಕಾರದ ವತಿಯಿಂದಲೇ ಅವನ್ನು ಆ ಸ್ಥಳಗಳಲ್ಲಿ ಹಂಚುವ ವ್ಯವಸ್ಥೆಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅದರ ಬಗ್ಗೆ ನನಗೆ ಕ್ಲಾರಿಫಿಕೇಷನ್ ಬೇಕು.

† ಶ್ರೀ ಕಾಗೋಡು ತಿಮ್ಮಪ್ಪ.—ಈಗ ಶಿವಮೊಗ್ಗದಲ್ಲಿ ಸಹ ಒಂದು ಶಾಖೆಯನ್ನು ಮಾಡಬೇಕೆಂದು ಪತ್ರಗಳು ಬರುತ್ತಿವೆ. ಆದ್ದರಿಂದ ಈಗ ಹಣ ಕೊಡತಕ್ಕಂಥವು, ಸಾಮಾನುಗಳನ್ನು ಕೊಡತಕ್ಕವರು ಜಿಲ್ಲಾಧಿಕಾರಿಗಳಿಗೆ ಕೊಡಬೇಕೇ; ಅಥವಾ ಕಾನ್ಸಿಲ್‌ನವರಿಗೆ ಕೊಡಬೇಕೇ ಎಂಬುದನ್ನು ಹೇಳಬೇಕು. ಇತ್ತು ಒಂದು ಕಡೆ ಅಧಿಕಾರಿಗಳ ಸಮಿತಿ, ಇನ್ನೊಂದು ಕಡೆ ಖಾಸಗೀಯವರು ಸಮಿತಿ ಮಾಡಿದರೆ ಇದರಿಂದ ಒಂದು ರೀತಿಯ ಗೊಂದಲ ಉಂಟಾದಹಾಗೆ ಆಗುತ್ತದೆ. ಸಮಿತಿಯನ್ನು ಮಾಡುವುದು ಜಿಲ್ಲಾಕೇಂದ್ರಗಳಲ್ಲಿ ಮಾಡಿ, ಇಲ್ಲವೇ ತಾಲ್ಲೂಕು ಕೇಂದ್ರಗಳಲ್ಲಿ ಮಾಡಿ. ಆದರೆ ಯಾವುದಾದರೂ ಒಂದು ಅಧಿಕೃತ ಸಮಿತಿಯನ್ನು ಮಾಡಿ. ಏಕೆಂದರೆ ಈ ಪರಿಹಾರ ಕಾರ್ಯಗಳಲ್ಲಿ ಹಣ ದುರುಪಯೋಗವಾಗುವುದಕ್ಕೆ ಬಹಳ ಅವಕಾಶ ಇದೆ. ಆದ್ದರಿಂದ ಸರ್ಕಾರದಿಂದ ಮಾನ್ಯತೆ ಪಡೆದಿರತಕ್ಕಂತಹ ಒಂದು ಸಂಸ್ಥೆಗೆ ಇದರ ಜವಾಬ್ದಾರಿಯನ್ನು ಕೊಟ್ಟರೆ ನಾವು ಸಹ ನಮ್ಮ ಕೈಲಾದ ಸಹಾಯ ಮತ್ತು ಸೇವೆಯನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ದೇಶದಲ್ಲಿ ಕಷ್ಟ ಯಾವ್ಯಾವ ಕಾಲದಲ್ಲಿ ಬರುತ್ತದೆ ಎಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಹೀಗೆ ಕಷ್ಟ ಹಲವು ಕಡೆಗಳಲ್ಲಿ ಬಂದಾಗ ಎಲ್ಲಾ ಕಡೆಗಳಲ್ಲಿಯೂ ಸರ್ಕಾರವೇ ಇದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕಾಗುವುದಿಲ್ಲ. ಸರ್ಕಾರದ ಮತಿಯಿಂದ ಯಾವುದಾದರೂ ಸಂಘ ಸಂಸ್ಥೆಗಳನ್ನು ಮಾಡಿದರೆ, ಆ ವಿಚಾರ ನಿಮ್ಮಗಮನಕ್ಕೆ ಬಾರದೆ ಹೋಗುವುದಿಲ್ಲ. ಈಗ ಅಲ್ಲಲ್ಲಿ ಅನುಕಂಪ ಇರುವ ಜನರು, ಸೇವೆ ಮಾಡತಕ್ಕ ಜನರು ಸಂಘಸಂಸ್ಥೆಗಳನ್ನು ಮಾಡಿಕೊಂಡು ಅದರ ಮುಖಾಂತರ ಜನರ ಸಹಾಯವನ್ನು ತೆಗೆದುಕೊಂಡು ಕೆಲಸ ಮಾಡಿದರೆ, ಅದು ಸ್ತುತ್ಯಾರ್ಹವಾದ ಕೆಲಸವಾಗುತ್ತದೆ. ಅದರ ಬಗ್ಗೆ ನಾವು ಟೀಕೆ ಟಿಪ್ಪಣಿಗಳನ್ನು ಮಾಡತಕ್ಕದ್ದು ಸರಿಯಲ್ಲ.

ಎರಡನೆಯ ವಿಚಾರವೇನೆಂದರೆ, ಹುಲ್ಲು ದವಸ, ಬಟ್ಟೆಬರೆ—ಇವುಗಳನ್ನು ಸಂಗ್ರಹಣೆ ಮಾಡಲು ಒಂದು ಕಾಲ್ಸಿಲ್ ಮಾಡಿಕೊಂಡಿದ್ದಾರೆಂದು ಪತ್ರಿಕೆಗಳಲ್ಲಿಯೂ ಸಹ ಬಂದಿದೆ ಎಂದು ಮಾನ್ಯ ಸದಸ್ಯರು ಓದಿದರು. ಅದರಲ್ಲಿ ಯಾರ್ಯಾರು ಇದ್ದಾರೆಂಬ ಮಾಹಿತಿ ನನ್ನ ಹತ್ತಿರ ಇಲ್ಲ. ಮತ್ತು ಮಾನ್ಯ ವಿ. ಎನ್. ಪಾಟೀಲರು—ಹುಲ್ಲು ಧಾನ್ಯ, ಮತ್ತು ಇನ್ನಿತರ ವಸ್ತುಗಳನ್ನು ಕೊಡುವುದಾದರೆ ಯಾರಿಗೆ ಕೊಡಬೇಕು ಎಂದು ಕೇಳಿದರು. ಅದನ್ನು ಸರ್ಕಾರಕ್ಕೆ ಕೊಡಬೇಕೆಂದು ಹೇಳತಕ್ಕಂತಹ ವಿಷಯವನ್ನು ನಾನು ಬೇರೆ ಹೇಳಬೇಕಾದ್ದಿಲ್ಲ. ಅದನ್ನು ಸರ್ಕಾರೀ ಯಂತ್ರದ ಮೂಲಕ ವಿತರಣೆ ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಉದಾಹರಣೆಗೆ ಬೊನ್ನೆ ನಾನು ಮಂಗಳೂರಿಗೆ ಹೋದಾಗ ಧರ್ಮಸ್ಥಳಕ್ಕೆ ಹೋಗಿದ್ದೆ. ಧರ್ಮಸ್ಥಳದ ಹೆಗಡೆಯವರು ಬರಗಾಲ ಪೀಡಿತ ಪ್ರದೇಶದ ಜನರಿಗೆ ಬೇಕಾದಷ್ಟು ಬಟ್ಟೆ ಬರೆ ಮತ್ತಿತರ ವಸ್ತುಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿ ಸರ್ಕಾರಕ್ಕೆ ಕೊಟ್ಟರು. ಆದ್ದರಿಂದ ಕೊಡುವಂತಹ ವಸ್ತುಗಳನ್ನು ನೇರವಾಗಿ ಸರ್ಕಾರಕ್ಕೂ ಕೊಡಬಹುದು ಇಲ್ಲವೇ ಸಂಘ ಸಂಸ್ಥೆಗಳ ಮೂಲಕವು ಸಹಾಯ ಮಾಡಬಹುದು. ಮತ್ತು ಸಂಘ ಸಂಸ್ಥೆಗಳಲ್ಲಿ ಏನಾದರೂ ದುರುಪಯೋಗವಾದರೆ ಅದಕ್ಕೆ ಇಂಡಿಯನ್ ಪೀನಲ್ ಕೋಡ್ ಇದ್ದೇ ಇದೆ. ಕಾನೂನು ಪ್ರಕಾರ ಯಾರು ತಪ್ಪು ಮಾಡಿದ್ದಾರೋ, ಅವರು ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ಮುಥೇಚ್ಛವಾಗಿ ಮನಸ್ಸನ್ನು ಕೆಡಿಸಿಕೊಳ್ಳುವುದಕ್ಕಿಂತ ಬದಲು ಅಲ್ಲಿ ಏನಾದರೂ ಲೋಪದೋಷಗಳು ಇದ್ದರೆ, ಅದನ್ನು ಸರ್ಕಾರದ ಗಮನಕ್ಕೆ ತಂದರೆ, ಸರಿಪಡಿಸಬಹುದು. ಸಾರ್ವಜನಿಕ ಸಂಘ ಸಂಸ್ಥೆಗಳು ಇಂತಹ ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕೆ ಹೊಟರೆ. ಅದನ್ನು ಪ್ರತಿಬಂಧಕ ಮಾಡುವುದಕ್ಕೆ ಸರ್ಕಾರಕ್ಕೆ ಕಾನೂನಲ್ಲಿ ಯಾವ ಅವಕಾಶವು ಇಲ್ಲ. ಯಾರಾದರೂ ಹೀಗೆ ಮಾಡಿದರೆ ನಾವು ಅದಕ್ಕೆ ಸಹಕಾರ ನೀಡೋಣ. ತಾವು ಸಹ ಅಂಥ ಕಾರ್ಯವನ್ನು ಮಾಡಿದರೆ ತಮಗೂ ನಾವು ಕೃತಜ್ಞರಾಗಿರುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ತಮಗೆ ಅನುಭವ ಇದೆ—ಹಿಂದೆ ಇಂತಹ ಕಾರ್ಯಗಳಲ್ಲಿ ಎಷ್ಟು ದುರುಪಯೋಗವಾಗಿದೆ ಎಂದು. ಡಿಫೆನ್ಸ್ ಫಂಡಿನಲ್ಲಿಯೂ ಹೀಗೆ ಆಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಬಳ್ಳಿಯ ಜನರೂ ಇದ್ದಾರೆ, ಕೆಟ್ಟ ಜನರೂ ಇದ್ದಾರೆ. ಯಾರಲ್ಲಿ ಲೋಪದೋಷಗಳು ಇರುತ್ತವೆ, ಮತ್ತು ಯಾರು ದುರುಪಯೋಗ ಮಾಡುತ್ತಾರೆ, ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಅಂಥ ಲೋಪದೋಷಗಳೇನಾದರೂ ಇದ್ದರೆ ತೋರಿಸಿಕೊಡಬೇಕು. ಇನ್ನೂ ಹೆಚ್ಚಿನ ವಿವರ ಬೇಕಾದರೆ ಆ ಮೇಲೆ ಅದನ್ನು ಒದಗಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈ ಕಾಲ್ಸಿಲ ಜಿಲ್ಲೆಜಿಲ್ಲೆಗೂ ಬರುತ್ತದೆ, ಅದನ್ನು ಭೇಟಿ ಮಾಡಬೇಕೆಂದು ಡಿ. ಸಿ. ಯವರಿಗೆ ಮತ್ತಿತರ ಅಧಿಕಾರಿಗಳಿಗೆ ಪತ್ರಗಳು ಬರುತ್ತಾ ಇವೆ. ಆದ್ದರಿಂದ ಇದು ಸರ್ಕಾರದ ವತಿಯಿಂದ ಆದ ಕಮಿಟಿಯೇ ಎಂಬುದನ್ನು ತಾವು ಸರಿಯಾಗಿ ಹೇಳುತ್ತಾ ಇಲ್ಲ. ಯಾರು ಬೇಕಾದರೂ ಇದನ್ನು ಮಾಡಬಹುದೇ ?

Sri H. M. CHANNABASAPPA.—I am making it very clear that any further information that is sought, I am going to make it available. There is no reason why either hon. Sri Vatal Nagaraj or any other hon. Member should get agitated over this. Any further details about this will be made available to the Hon. Members during the course of this session.

ಶ್ರೀ ಎಚ್. ಡಿ. ದೇವೇಗೌಡ.—ಸ್ಟೇಟ್ ರಿಲೀಫ್ ಕೌನ್ಸಿಲ್ ಖಾನಗಿಯಾಗಿ ಮಾಡಿಕೊಂಡಿದ್ದರೆ ಅದರ ವಿಚಾರ ಬೇರೆಯೇ ಆಗುತ್ತದೆ; ಸರ್ಕಾರ ನೇಮಕ ಮಾಡಿದ್ದರೆ ಅದು ಬೇರೆಯೇ ಆಗುತ್ತದೆ. ಖಾನಗೀಯವರು ಮುಖ್ಯಮಂತ್ರಿಯವರ ಹೆಸರನ್ನು ಹಾಕಿ, ಫೊಟೋ ಹಾಕಿ ಜನರ ಸಹಕಾರವನ್ನು ಅಪೇಕ್ಷೆ ಮಾಡತಕ್ಕದ್ದು ಸರಿಯಾದುದಲ್ಲ. ನಾಳೆ ಪ್ರಧಾನ ಮಂತ್ರಿಯವರ ಫೊಟೋ ಹಾಕಿಕೊಂಡು ದುಡ್ಡು ಕೇಳಿ, ಹಣ ಸಂಗ್ರಹ ಮಾಡಿದರೆ, ಅದನ್ನು ಸರಿಯಾಗಿ ಉಪಯೋಗ ಮಾಡಿದ್ದಾರೆಯೇ ಇಲ್ಲವೇ ಎಂಬುದರ ಜವಾಬ್ದಾರಿ ಹೋರುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ಜೊತೆಗೆ ಸ್ಟೇಟ್ ರಿಲೀಫ್ ಕಮಿಟಿ ಸೆಕ್ರಟರಿ ಗುಲ್ಬರ್ಗದಲ್ಲಿ ಹೋಗಿ ಅಧಿಕಾರಿಗಳನ್ನು ಭೇಟಿ ಮಾಡಿ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟದ್ದು ನನ್ನ ಹತ್ತಿರ ಇದೆ.

ಶ್ರೀ ಬಾಪು ಗೌಡ ರಾಯಪ್ಪ.—ಅದೂ ಅಲ್ಲದೆ ಅವರು ಸರ್ಕಾರೀ ಕಾರುಗಳನ್ನು ಉಪಯೋಗಿಸಿಕೊಂಡಿದ್ದಾರೆ.

2-30 P.M.

Sri H. N. NANJE GOWDA (Minister of State for Major Irrigation).—On a point of order, Sir. Under Rule 288(iv) a member while speaking shall not reflect on any determination of the Assembly except on a motion for rescinding it. It was decided in this House that we shall not discuss drought till the one-man committee submits the report. Again we are reopening it.

Madam SPEAKER.—There is no point of order.

ಶ್ರೀ ಎಚ್. ಡಿ. ದೇವೇಗೌಡ.—ಸ್ಟೇಟ್ ರಿಲೀಫ್ ಕೌನ್ಸಿಲ್ ಜವಾಬ್ದಾರಿ ಏನು ಎನ್ನತಕ್ಕ ಬಗ್ಗೆ ಸರ್ಕಾರ ವಿವರಣೆ ಕೊಡಬೇಕು. ಇವೊತ್ತು ಈ ಸಭೆ ಮುಗಿಯುವುದರೊಳಗೆ ಆ ಬಗ್ಗೆ ವಿವರಣೆ ಕೊಟ್ಟರೆ ಆ ಬಗ್ಗೆ ನಾವು ನಮ್ಮ ಅಭಿಪ್ರಾಯವನ್ನು ಸೂಚಿಸುವುದಕ್ಕೆ ಅನುಕೂಲವಾಗುತ್ತದೆ.

Sri H. M. CHANNABASAPPA.—Madam, I have already submitted that whatever information is at the disposal of the Government will be given to the members. Whatever further information members have sought I will certainly ascertain and make it available during the course of the session as it may not be possible to do so during the course of today.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯ ಮಾನ್ಯ ಉಪನಾಯಕರು ಆ ಸ್ಟೇಟ್ ರಿಲೀಫ್ ಕೌನ್ಸಿಲ್ ಬಗ್ಗೆ ಇವೊತ್ತು ಇನ್‌ಫರ್‌ಮೇಷನ್ ಒದಗಿಸುವುದು ಕಷ್ಟವಾಗುತ್ತದೆ ಎಂದು ಹೇಳಿದರು. ಮಾನ್ಯ ಮಂತ್ರಿಗಳು ಈಗ ರೆವಿನ್ಯೂ ಸೆಕ್ರೆಟರಿಯವರಿಗೆ ಫೋನ್ ಮಾಡಿ ಇದರ ಬಗ್ಗೆ ಇನ್‌ಫರ್‌ಮೇಷನ್ ತಿಳಿದುಕೊಳ್ಳಬಹುದು. ಹಿಂದೆ ನ್ಯಾಷನರ್ ಡಿಫೆನ್ಸ್ ಫಂಡ್ ಅನ್ನು ಅಧಿಕಾರಿಗಳು ವಸೂಲು ಮಾಡಿದ ಬಗ್ಗೆ ಅತ್ಯಾಚಾರ ನಡೆದು ಅದೆಲ್ಲಾ ಈ ಸಭೆಯಲ್ಲಿ ಚರ್ಚೆಯಾಗಿದೆ. ಆದ್ದರಿಂದ ಈಗ ನಾನು ಹೇಳುವುದೇನೆಂದರೆ ಈಗ ಸ್ಟೇಟ್ ರಿಲೀಫ್ ಕೌನ್ಸಿಲ್‌ನಲ್ಲಿ ಈ ರಾಜ್ಯದ ಮುಖ್ಯ ಮಂತ್ರಿಗಳ ಹೆಸರು ದುರುಪಯೋಗ ಆಗಿದೆ. ಇದರಲ್ಲಿ ಬರಗಾಲ ಪರಿಹಾರ ಬೇರೆಯವರಿಗೆ ಆದರೆ ಕಷ್ಟ. ಆದ್ದರಿಂದ ತಾವು ದಯಮಾಡಿ ಇದರ ವಿವರವನ್ನು ಆದಷ್ಟು ಬೇಗ ಕೊಡಬೇಕು.

Sri H. M. CHANNABASAPPA.—In addition to the information already made available to the members, by tomorrow evening or on Saturday I will make available all the information that the hon. Members want.

SRI KONANDUR LINGAPPA.—Rule 48 (1) says, " A member who desires an immediate reply to a question of urgent nature " ಎಂದು ಇದೆ. ನಾನು ಷಾರ್ಟ್ ನೋಟೀಸ್ ಕ್ವೆಶ್ಚನ್ ಕಳುಹಿಸಿ ಒಂದು ವಾರ ಆಯ್ತು ಇನ್ನೂ ಅದಕ್ಕೆ ಉತ್ತರ ಬರಲಿಲ್ಲ. ಇದಕ್ಕೆ ಉತ್ತರ ಬರಲು ಇನ್ನು ಎಷ್ಟು ದಿವಸ ಬೇಕು ?

SRI H. M. CHANNABASAPPA.—It is not the intention of the Government to hide anything that the hon. Members are legitimately entitled to. But it depends upon the nature of the question. Sometimes if the information is readily available at the Secretariat level, we shall certainly make it available immediately. Without knowing what exactly is the nature of the question, if the hon. Member goes on accusing the Government, what can Government do ?

ಶ್ರೀ ಎಸ್. ಬಂಗಾರಪ್ಪ.—ಸೆಕ್ರೆಟೇರಿಯಟ್ ಲೆವೆಲ್ಲಿನಲ್ಲಿರತಕ್ಕ ಉತ್ತರವನ್ನು ತರಿಸುವುದಕ್ಕೆ ಎಷ್ಟು ದಿವಸ ಬೇಕು ? ಹಿಂದೆ ಶ್ರೀಮಾನ್ ಚನ್ನಬಸಪ್ಪನವರು ಮತ್ತು ಸಿದ್ಧವೀರಪ್ಪನವರು ಈ ಕಡೆ ಇದ್ದಾಗ ಎಷ್ಟು ದಿವಸಗಳಾದರೂ ಸದನ್ಯರು ಕಳುಹಿಸಿರತಕ್ಕ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ ಎಂದು ಗರಾಜೆ ಮಾಡುತ್ತಿದ್ದರು. ಈಗ ಅವರು ಆ ಕಡೆ ಹೋಗಿ ಮಂತ್ರಿಗಳಾಗಿರುವಾಗ ಸದನ್ಯರ ಪ್ರಶ್ನೆಗಳಿಗೆ ಏತಕ್ಕೆ ಬೇಗ ಉತ್ತರಗಳನ್ನು ತರಿಸುವ ಪ್ರಯತ್ನ ಮಾಡಬಾರದು ?

ಅಧ್ಯಕ್ಷರು.—ಆ ಪ್ರಶ್ನೆಗೆ ಉತ್ತರ ಬಂದ ಕೂಡಲೇ ಇಲ್ಲಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಪ್ರಶ್ನೆಗೆ ಎಷ್ಟು ಕಾಲದಲ್ಲಿ ಉತ್ತರ ಕೊಡಬೇಕು ಎಂಬುದನ್ನು ನಿರ್ಣಯಮಾಡಬೇಕು. ಷಾರ್ಟ್‌ನೋಟೀಸ್ ಪ್ರಶ್ನೆಗೆ ಸೆಕ್ರೆಟೇರಿಯಟ್ ಲೆವೆರ್‌ನಲ್ಲಿ ಉತ್ತರ ದೊರೆಯುವಾಗ ಅದಕ್ಕೆ ಉತ್ತರ ಕೊಡಲು ತಿಂಗಳುಗಟ್ಟಲೇ ಬೇಕಾಗುತ್ತದೆಯೇ ಇಂಥಾ ನನ್ನಿವೇಶದಲ್ಲಿ ಉದಾಸೀನ ಕಂಡುಬಂದರೆ ಅಧ್ಯಕ್ಷರು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕು. ಮತ್ತು ಆದೇಶವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷಿಣಿಯವರೇ, ನಾನು 9-10 ಕಾಲ್ ಅಟೆನ್‌ಷನ್ ನೋಟಿಸ್‌ಗಳನ್ನು ಕೊಟ್ಟಿದ್ದೇನೆ. ರೆವಿನ್ಯೂ ಸಚಿವರ ಗಮನ ಸೆಳೆದಿದ್ದೇನೆ. 14 ಡಿಸ್ಟ್ರಿಕ್ಟ್‌ಗಳಿಗೆ ಅನ್ಯಾಯವಾಗಿದೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಬೇಕು. ತಾವು ಈ ರೀತಿ ಮಾಡಿದರೆ ತೊಂದರೆಯಾಗುತ್ತದೆ. ಕಾಲ್ ಅಟೆನ್‌ಷನ್ ನೋಟೀಸ್ ಸರ್ಕಾರದಿಂದ ಉತ್ತರ ಬಂದ ತಕ್ಷಣ ತೆಗೆದುಕೊಳ್ಳುತ್ತೇವೆ.

Mysore Land Reforms (Amendment) Bill, 1972—Motion to Consider

(Debate Continued)

ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಮಾನ್ಯ ಅಧ್ಯಕ್ಷಿಣಿಯವರೇ, ನಾನು ನಿನ್ನೆ ಭೂಸುಧಾರಣಾ ವಿಧೇಯಕದ ಮೇಲೆ ಭಾಷಣ ಮಾಡುತ್ತಾ ಪಟ್ಟಣಗಳ ಹಾಗೂ ಹಳ್ಳಿಗಳ ಮಧ್ಯೆ ಆರ್ಥಿಕವಾಗಿಯಾಗಲೀ, ಸಾಮಾಜಿಕವಾಗಿಯಾಗಲೀ ಬಹಳ ವ್ಯತ್ಯಾಸಗಳು ಇವೆ ಎಂದು ಮಾತನಾಡುತ್ತಿದ್ದೆ. ಹಿಂದೆ ಜಮೀನ್ದಾರಿ ಪದ್ಧತಿ ರದ್ದಾಯಿತು. ಇನಾಂದಾರಿ ಪದ್ಧತಿ ರದ್ದಾಯಿತು. ಈಗ ನಮ್ಮ ಮುಂದೆ ಇರತಕ್ಕ ಸಮಸ್ಯೆ ಏನೆಂದರೆ ಭೂಸುಧಾರಣೆಯ ಸಮಸ್ಯೆ. 100 ಎಕರೆಗಳಿಗಿಂತ ಕಡಿಮೆ ವಿಸ್ತೀರ್ಣ ಇರತಕ್ಕಂಥಾ ಭೂಹಿಡುವಳಿದಾರರ ವಿಚಾರವಾಗಿ ನಾವು ಮಾತನಾಡಬೇಕಾಗಿದೆ. ಪಟ್ಟಣ ಹಾಗೂ ಹಳ್ಳಿಗಳ ಮಧ್ಯೆ ಸುಖ ಸೌಲಭ್ಯಗಳಲ್ಲಿ ಬಹಳ ಅಂತರ ಇದೆ. ಜಮೀನ್ದಾರಿ ಸಿನ್ಸಂ ಹೋದರೆ ಪಟ್ಟಣಗಳಲ್ಲಿ ಬಂಡವಾಳ ಷಾಹಿಗಳು, ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಇಟ್ಟುಕೊಂಡಿರುವವರು ಒಂದು ಕಡೆ ಇದ್ದಾರೆ. ಮತ್ತೊಬ್ಬರಲ್ಲಿ ಕೋಟ್ಯಾಂತರ ಜನರು ಹೊಟ್ಟೆಗೆ ಇಲ್ಲದೆ ಸಾಯುತ್ತಿದ್ದಾರೆ. ಇಂದು ನಾವು ಬಂಡವಾಳಶಾಹಿಗಳ ಬಗ್ಗೆ ಮಾತನಾಡುತ್ತಾ ಇಲ್ಲದಿದ್ದರೂ ಸಹ ಮಿತಿಯ ನೀತಿಯನ್ನು ಎಲ್ಲ ರಾಜಕಾರಣಿಗಳು ಮಾತನಾಡುತ್ತಾ ಇದ್ದಾರೆ. ಅದರಲ್ಲೂ ಮುಖ್ಯವಾಗಿ ಎಲ್ಲ ರಾಜಕಾರಣಿಗಳು ಮಧ್ಯಮವರ್ಗದ ರೈತರಲ್ಲಿ ಐಶ್ವರ್ಯವೆಲ್ಲಾ ಕೇಂದ್ರೀಕರಿಸಿದೆ, ಅದರ ಹಂಚಿಕೆಯಾಗಬೇಕಾಗಿದೆ ಎಂದು ಹೇಳುತ್ತಿದ್ದಾರೆ. ನನ್ನ ಒಂದು ಅನುಭವದಲ್ಲಿ ಹೇಳುವುದಾದರೆ, ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾಗಿದ್ದರೂ ಸಹ, ರೈತರ ಸ್ಥಿತಿ ನಾವು ನಿರೀಕ್ಷೆ ಮಾಡಿದಷ್ಟು ಉತ್ತಮಗೊಂಡಿಲ್ಲ; ಅವರು ಬಹಳ ಹೀನ ಸ್ಥಿತಿಯಲ್ಲಿದ್ದಾರೆ, ಬಹಳ ಅಧೋಗತಿಯಲ್ಲಿದ್ದಾರೆಂದು